

ನೋಡತೊಡಗಿದಳು. ನೊರೆಗಳು ಉಕ್ಕುಕ್ಕುತ್ತಾ ಅವಳತ್ತ ಬರುವಂತೆ ಕಂಡು ಚಣ ಅಂಜಿದರೂ ನಕ್ಕು ಮೊಬೈಲ್ ತೆಗೆದಳು. ನಾಳೆ ತಾನೇ ತನ್ನ ಬರ್ತ್‌ಡೇ... ಓ! ಮರೆತೇ ಹೋದೆ! ಇಷ್ಟು ಬೇಗ ಸಂದೇಶಗಳು... ಇನ್ಸ್ಟಾಗ್ರಾಮ್, ಫೇಸ್‌ಬುಕ್ ಮೆಸೆಂಜರ್, ವಾಟ್ಸಾಪ್ ಮತ್ತು ಇಮೇಲ್‌ಗಳ ತುಂಬಾ ಶುಭಾಶಯಗಳ ಮಹಾಪೂರ. ಅವಳ ಎದೆ ಉಕ್ಕಿ ಎದ್ದು ಕಡಲತ್ತ ಓಡಿದಳು. ಅಲೆಗಳ ಮೇಲೆ ಉಯ್ಯಾಲೆಯಾಡುತ್ತಾ ಕೈಗಳ ನೀಟಿ ಮುಖ ಎತ್ತಿ ಆಕಾಶವ ನೋಡಿ 'ಲೈಫ್ ಈಸ್ ಸೋ ಬ್ಯೂಟಿಫುಲ್' ಎಂದು ಕೂಗಿದಳು.

ಮೂರು ವರ್ಷಗಳ ಹಿಂದೆ ಹೈದ್ರಾಬಾದಿನ ಖಾಸಗಿ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿದ್ದ ಸಮಯದಲ್ಲಿ ಈ ಕಾಲದ ಯೌವ್ವನಿಗರು ಉಪಯೋಗಿಸುವ ಸೋಷಿಯಲ್ ಮೀಡಿಯಾಗಳಲ್ಲಿ ತನ್ನನ್ನು ಸ್ಥಾಪಿಸಿಕೊಂಡಿದ್ದಳು ಶೋಭಾ. ಶಾಸ್ತ್ರೀಯವಾಗಿ ಕರ್ನಾಟಕ ಸಂಗೀತ ಕಲಿತಿದ್ದರಿಂದ ಆಗಾಗ ಶಾಲೆಯಲ್ಲಿ ಭಾವಗೀತೆಗಳನ್ನು ಹಾಡಿ ಎಲ್ಲರ, ಮುಖ್ಯವಾಗಿ ಗಂಡಸರೆದೆಗಳೊಳಗೆ ಪ್ರವಾಹ ಉಕ್ಕಿಸುತ್ತಿದ್ದಳು. ಮದುವೆಯಾಗದೇ ಇದ್ದ ಅವಳನ್ನು ವರಿಸಲು ಹತ್ತಾರು ಮಂದಿ ಗಂಡಸರು ಯತ್ನಿಸಿ ಸೋತಿದ್ದರು. ಅವರಲ್ಲಿ ಈಶ್ವರ್ ಎಂಬ ಗಣಿತದ ಮೇಷ್ಟ್ರು ಇದ್ದ. ತನ್ನ ಗಂಭೀರ ಮಾತುಗಳಿಂದಲೇ ನೂರಾರು ಜನರನ್ನು ಸೆಳೆದು ಅವರಿಂದ ತನ್ನ ಕೆಲಸಗಳನ್ನು ಸುಲಭವಾಗಿ ಮಾಡಿಕೊಳ್ಳುವಂತಹ ಕಿಲಾಡಿ. ಅವನ ವಿದ್ವತ್ತಿಗೆ ಮಾರು ಹೋಗದವರೇ ವಿರಳ ಎಂದಿರುವಾಗ ಶೋಭಾ ಮಾತ್ರ ಅವನ ಬಲೆಗೆ ಬೀಳದೆ ತಪ್ಪಿಸಿಕೊಳ್ಳುತ್ತಿದ್ದಳು. ಅಕ್ಕರೆಯಿಂದ ಮಾತನಾಡಿಸುವಂತೆ ಕಾಣುವ ಯಾವ ಗಂಡಸರನ್ನೂ ಅವಳು ಹತ್ತಿರಕ್ಕೂ ಬಿಟ್ಟುಕೊಳ್ಳುತ್ತಿರಲಿಲ್ಲ. ಹಾಗೆಯೇ ಗಂಡು ದರ್ಪದಿಂದ ವರ್ತಿಸುವವರನ್ನು ಕಂಡರೆ ಕುದಿಯುತ್ತಾ ಅವರ ಸೊಕ್ಕನ್ನು ಮುರಿಯುವ ಅವಕಾಶಕ್ಕಾಗಿ ಕಾಯುತ್ತಿದ್ದಳು. ಹಾಗೆ ಮುರಿದಿದ್ದಾಳೆ ಕೂಡ. ಪುರುಷಾಧಿಕಾರಗಳನ್ನು ಹೊತ್ತು ಮೆರೆಯುವ ಸಿನಿಮಾಗಳ ವಿರುದ್ಧ ಆತ್ಮೀಯರೊಂದಿಗೆ ಸೆಟೆದು ನಿಲ್ಲುತ್ತಿದ್ದಳು. ಈ ಎಲ್ಲಾ ಕಾರಣಗಳಿಂದಾಗಿ ಇವಳನ್ನು ಮದುವೆಗೆ ಒಪ್ಪಿಸುವ ಹಾದಿಗಳೇ ಗೊತ್ತಾಗದೇ ಇವಳ ಹೆತ್ತವರು ಅಸಹಾಯಕರಾಗಿದ್ದರು. ಅವಳಿಗೆ ಸರಿಯೆನ್ನಿಸುವ ದಿನ ಮದುವೆಯಾಗಲಿ ಎಂದು ಕೈಚೆಲ್ಲಿದ್ದ ಅವರನ್ನು ಖುಷಿಪಡಿಸುವಂತಹ ಒಂದು ಘಟನೆ ನಡೆಯಿತು. ಅವಳು ಫಾರಿನ್‌ಗೆ ಹೋಗುತ್ತೇನೆಂದು ಹೇಳಿದಾಗ ಒಳಗೊಳಗೆ ಸಂತಸಗೊಂಡರೂ ತೋರಿಸಿಕೊಳ್ಳದೆ ಅವರು ತಕ್ಷಣ ಒಪ್ಪಿಗೆ ಸೂಚಿಸಿರಲಿಲ್ಲ. ಅಲ್ಲಿಗೆ ಹೋದರಾದರೂ ಬದಲಾಗಬಹುದು, ಯಾವ ಹುಡುಗನನ್ನಾದರೂ